

# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | f / ಕನ್ನಡ post | Price: ₹1

Vol.No.02 | Issue. 206 | Pages. 2 | Date: 25-07-2026, SATURDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 206 – ಪುಟಗಳು : 2 | 25-07-2026 | ಶನಿವಾರ | Ph: 8762954248 | ದರ : ₹1


# ಕಾಡಾನೆಗಳ ಉಪಟಳಕ್ಕೆ ಬಸವಳಿದ ಜನತೆ

## ಮಲೆನಾಡು ಭಾಗದ ಜನರ ಗೋಳು ಕೇಳೋರಿಲ್ಲ | ಪ್ರತಿಭಟನೆ ತೀವ್ರಗೊಳಿಸುವ ಎಚ್ಚರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲ್ಲೂಕಿನ ವಿವಿಧೆಡೆ ಕಾಡಾನೆಗಳ ಉಪಟಳ ಹೆಚ್ಚಿದ್ದು ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿ ಶುಕ್ರವಾರ ಕಾಫಿ ಬೆಳೆಗಾರರು ಹಾಗೂ ಸ್ಥಳೀಯರು ಶುಕ್ರವಾರ ಕೋಗೋಡು-ಚೀಕನಹಳ್ಳಿ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಮಲೆನಾಡು ಭಾಗದಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳನ್ನು ಶಾಶ್ವತವಾಗಿ ಸ್ಥಳಾಂತರಿಸಿ ನೆಮ್ಮದಿಯ ಜೀವನಕ್ಕೆ ಅನುಕೂಲ ಮಾಡಿ ಕೊಡಬೇಕು. ಇಲ್ಲವಾದರೆ ಮುಂಬರುವ ಚುನಾವಣೆ ಬಹಿಷ್ಕರಿಸಬೇಕಾಗುತ್ತದೆ ಎಂದು ಗ್ರಾಮಸ್ಥರು ಎಚ್ಚರಿಕೆ ನೀಡಿದರು.

ಕಾಫಿ ಬೆಳೆಗಾರರ ಸಂಘದ ಜಿಲ್ಲಾ ನಿರ್ದೇಶಕ ಕೋಗೋಡು ಸಂತೋಷ್ ಮಾತನಾಡಿ, ಅರೇಹಳ್ಳಿ ಹೋಬಳಿ ಭಾಗದಲ್ಲಿ 100ಕ್ಕೂ ಹೆಚ್ಚು ಕಾಡಾನೆಗಳಿದ್ದು, ಅವುಗಳಿಂದ ನೂರಾರು ಎಕರೆಯಲ್ಲಿ ಬೆಳೆ ನಾಶವಾಗುತ್ತಿದೆ. ಜೊತೆಗೆ ಸಾಕಷ್ಟು ಜನರು ಬಲಿಯಾಗಿದ್ದಾರೆ. ರೈತರು ತೋಟಕ್ಕೆ ಹೋಗಿ ವಾಪಸ್ ಮನೆಗೆ ಬರುತ್ತಾರೆ ಎನ್ನುವ ನಂಬಿಕೆ ಇಲ್ಲದಂತಾಗಿದೆ. ಹಗಲು ರಾತ್ರಿ ಎನ್ನದೆ ಕಾಡಾನೆಗಳು ಎಲ್ಲೆಂದರಲ್ಲಿ ಓಡಾಡುತ್ತಿವೆ. ಕಾಡಾನೆಗಳ ಸಮಸ್ಯೆಗೆ ಸರ್ಕಾರ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದರು.

ಟೌನ್‌ಶಿಪ್ ಯೋಜನೆಗಾಗಿ ಬಿಡದಿಯಲ್ಲಿ ರೈತರಿಗೆ ಹೇಗೆ ಎಕರೆಗೆ 2 ರಿಂದ 3 ಕೋ.ರೂ. ಪರಿಹಾರ ಘೋಷಿಸಲಾಗಿದೆಯೋ ಅದೇ ರೀತಿ ನಮಗೂ ಎಕರೆಗೆ 1 ಕೋ.ರೂ. ನೀಡಿದರೆ ಸ್ಥಳಾಂತರವಾಗುತ್ತೇವೆ. ಬೇರೆ ಯಾವುದೇ ಜಾಗದಲ್ಲಿ ವ್ಯವಸ್ಥೆ ಕಲ್ಪಿಸಿದರೆ ಬದುಕುತ್ತೇವೆ. ಸರ್ಕಾರ ತುರ್ತಾಗಿ ಆನೆಗಳ ಅಥವಾ ಮನುಷ್ಯರ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳಬೇಕು. ಈ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಿದರೆ ರಾಷ್ಟ್ರೀಯ ಹೆದ್ದಾರಿ ತಡೆದು ಉಪವಾಸ ಸತ್ಯಾಗ್ರಹ ಮಾಡಬೇಕಾಗುತ್ತದೆಂದು ಎಚ್ಚರಿಸಿದರು.

ಕಾಫಿ ಬೆಳೆಗಾರರ ಸಂಘದ ತಾಲ್ಲೂಕು ಕಾರ್ಯದರ್ಶಿ ಗೆಂಡೇಹಳ್ಳಿ ಲೋಕೇಶ್ ಮಾತನಾಡಿ, 30 ವರ್ಷದಿಂದ ಬೆಳೆಸಿದ ಗಿಡಗಳನ್ನೆಲ್ಲಾ ಆನೆಗಳು ಕಿತ್ತು ಹಾಕಿವೆ. ಮತ್ತೆ ಹಲುಸಾದ ಬೆಳೆ ಕಾಣಬೇಕೆಂದರೆ 30 ವರ್ಷ ಶ್ರಮಪಡಬೇಕು. ಆನೆಗಳ ಸ್ಥಳಾಂತರ ಪ್ರಕ್ರಿಯೆ ಕಾಟಾಚಾರಕ್ಕೆ ನಡೆಯುತ್ತಿದೆ. ಸರ್ಕಾರ ಕೋಟ್ಯಾಂತರ ರೂ. ಖರ್ಚು ಮಾಡುತ್ತಿದ್ದರೂ ಪ್ರಯೋಜನವಾಗುತ್ತಿಲ್ಲ. ಅರಣ್ಯದಲ್ಲಿ ಆನೆಗಳಿಗೆ ಬೇಕಾದ ಆಹಾರದ ಗಿಡಗಳನ್ನು ಬೆಳೆಸಬೇಕೆಂದರು.



ಆಧುನಿಕರಣ ಹೆಸರಿನಲ್ಲಿ ಆನೆಗಳ ವಾಸಸ್ಥಾನಕ್ಕೆ ಮನುಷ್ಯರು ಅತಿಕ್ರಮಣ ಪ್ರವೇಶ ಮಾಡಿದ್ದಾರೆಂಬ ಮಾತುಗಳು ಕೇಳಿಬರುತ್ತವೆ. ಮೊದಲು ಆ ತಪ್ಪು ಮನಸ್ಥಿತಿಯಿಂದ ಹೊರ ಬರಬೇಕು. ನಮ್ಮ ಜಾಗಕ್ಕೆ ಆನೆಗಳು ಬಂದಿವೆ ಎಂಬ ಸತ್ಯವನ್ನು ಎಲ್ಲರೂ ಅರಿಯಬೇಕು. ಕೇರಳದಲ್ಲಿ ವ್ಯಕ್ತಿ ಸತ್ತರೆ ಕರ್ನಾಟಕ ಸರ್ಕಾರ ಪರಿಹಾರ ಕೊಡುತ್ತಾರೆ. ಇಲ್ಲಿ ಕೋಟ್ಯಾಂತರ ರೂ. ಹಾನಿಯಾದರೂ ತಿರುಗಿ ನೋಡುತ್ತಿಲ್ಲ. ಅಧಿಕಾರಿಗಳು ಇಲ್ಲಿನ ಮಾಹಿತಿ ತಿಳಿಸಿ ಸುಮ್ಮನಾಗುತ್ತಾರೆ ಹೊರತು ಮತ್ತೆ ಗಮನ ಹರಿಸುವುದಿಲ್ಲ. ಆದ್ದರಿಂದ ಮುಂದಿನ ಒಂದು ವಾರದೊಳಗೆ ಸಮಸ್ಯೆಗೆ ಕ್ರಮಕ್ಕೈಗೊಳ್ಳದಿದ್ದಲ್ಲಿ ರಾಷ್ಟ್ರಿಯ ಹೆದ್ದಾರಿ ರಸ್ತೆ ತಡೆಯ ಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹರೀಶ್ ನಾಗೇನಹಳ್ಳಿ ಮಾತನಾಡಿ, ಕಳೆದ ನಾಲ್ಕು ವರ್ಷಗಳಿಂದ ಚೀಕನಹಳ್ಳಿ-ಹುನುಗನಹಳ್ಳಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಕಾಡಾನೆಗಳ ಉಪಟಳ ಮಿತಿ ಮೀರಿದೆ. ಇಲ್ಲಿ ಜೀವನ ನಡೆಸುವುದೇ ಕಷ್ಟವಾಗಿದೆ. ಈಗಾಗಲೇ ಕಾಡಾನೆಗಳ ದಾಳಿಗೆ ಜನರು ಬಲಿಯಾಗಿದ್ದಲ್ಲದೆ, ನೂರಾರು ಎಕರೆ ಬೆಳ ನಾಶವಾಗಿದೆ. ಆದ್ದರಿಂದ ಸರ್ಕಾರಕ್ಕೆ 8 ದಿನದ ಗಡುವು ನಿಡುತ್ತಿದ್ದೇವೆ. ಅಷ್ಟರೊಳಗೆ ಕಾಡಾನೆಗಳನ್ನು ಶಾಶ್ವತವಾಗಿ ಓಡಿಸಬೇಕು. ಇಲ್ಲದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು ಎಂದರು.

ಕಾಫಿ ಬೆಳೆಗಾರರ ಸಂಘದ ಹೋಬಳಿ ಅಧ್ಯಕ್ಷ ಅನಂತರಾಜು, ಗ್ರಾಮ ಪಂಚಾಯಿತಿಇ ಮಾಜಿ ಅಧ್ಯಕ್ಷ ಹರೀಶ್, ಬೆಳೆಗಾರರಾದ ರಮೇಶ್ ಸುವರ್ಣ, ನವೀನ್, ಸುನೀಲ್, ವಿಶ್ವನಾಥ್, ಗೋಪಿ, ಮಂಜುನಾಥ ದೀಕ್ಷಿತ್, ಸಂದೀಪ, ಶಶಿಕಲಾ, ಯೋಗೇಂದ್ರ ಇತರರು ಹಾಜರಿದ್ದರು. ಪ್ರತಿಭಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ತ್ವರಿತಗತಿಯ ಕ್ರಮದ ಭರವಸೆ ನೀಡಿದ ಬಳಿಕ ಪ್ರತಿಭಟನೆ ವಾಪಸ್ ಪಡೆಯಲಾಯಿತು.

# ಶಾಸಕ ಮಂಜು ಅವರಿಂದ ಸಲವತ್ತು ವಿತರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ವಿಶೇಷ ಚೇತನರಿಗೆ ಮೀಸಲಾದ ಅನುದಾನದಡಿ ವಿವಿಧ ಉಚಿತ ಸಹಾಯಕ ಸಲಕರಣೆಗಳನ್ನು ಆಲೂರು-ಸಕಲೇಶಪುರ ಶಾಸಕ ಸಿಮೆಂಟ್ ಮಂಜು ವಿತರಿಸಿದರು.

ಬಳಿಕ ಮಾತನಾಡಿದ ಅವರು, ಸಮಾಜದ ಮುಖ್ಯವಾಹಿನಿಯಲ್ಲಿ ವಿಶೇಷ ಚೇತನರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಅಗತ್ಯ ಸೌಲಭ್ಯಗಳನ್ನು ಸರ್ಕಾರ ಒದಗಿಸುತ್ತಿದ್ದು, ಇವು ಅವರ ದೈನಂದಿನ ಜೀವನ ಸುಗಮಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಮುಂದೆಯೂ ವಿಶೇಷ ಚೇತನರ ಕಲ್ಯಾಣಕ್ಕೆ ಆದ್ಯತೆ ನೀಡಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ 4 ವಾಕಿಂಗ್ ಸ್ಟಿಕ್, 5 ವಾಟರ್ ಬೆಡ್, 6 ಹಿಯರಿಂಗ್ ಏಡ್‌ಗಳು ಹಾಗೂ 4 ವ್ಹೀಲ್‌ಚೇರ್‌ಗಳನ್ನು ಫಲಾನುಭವಿಗಳಿಗೆ ವಿತರಿಸಲಾಯಿತು. ಅಲ್ಲದೆ ಅಂಗನವಾಡಿ ಕೇಂದ್ರಗಳಿಗೆ



30 ಟೇಬಲ್ ಮತ್ತು 150 ಕುರ್ಚಿಗಳನ್ನು ವಿತರಿಸಲಾಯಿತು. ಗ್ರಾಮೀಣ ಆಸ್ಪತ್ರೆಗಳಿಗೆ 5 ಇಸಿಜಿ ಯಂತ್ರಗಳನ್ನೂ ಹಸ್ತಾಂತರಿಸಲಾಗಿದೆ ಎಂದರು. ಮುಂದಿನ ದಿನಗಳಲ್ಲಿ ಅಂಗನವಾಡಿ ಕೇಂದ್ರಗಳು ಹಾಗೂ ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯವಿರುವ ಇನ್ನಷ್ಟು ಮೂಲ ಸೌಕರ್ಯ ಮತ್ತು ವೈದ್ಯಕೀಯ ಉಪಕರಣಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಜನರ ಆರೋಗ್ಯ ಹಾಗೂ ಮಕ್ಕಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುವ ನಿಟ್ಟಿನಲ್ಲಿ ನಿರಂತರವಾಗಿ ಕೆಲಸ ಮಾಡಲಾಗುವುದು ಎಂದು ಹೇಳಿದರು. ಫಲಾನುಭವಿಗಳು ಸರ್ಕಾರದಿಂದ ದೊರೆತಿರುವ ಸಲಕರಣೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ಸ್ವಾವಲಂಬಿ ಜೀವನ ನಡೆಸುವಂತೆ ಸಲಹೆ ನೀಡಿದರು. ಸರ್ಕಾರದ ವಿವಿಧ ಕಲ್ಯಾಣ ಯೋಜನೆಗಳ ಸದುಪಯೋಗವನ್ನು ಪ್ರತಿಯೊಬ್ಬ ಅರ್ಹ ಫಲಾನುಭವಿಯೂ ಪಡೆಯಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಹಾಸನ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಎಚ್.ಡಿ. ಗಿರೀಶ್, ತಾಲ್ಲೂಕು ಪಂಚಾಯಿತಿ ಸಿಬ್ಬಂದಿ, ವಿವಿಧ ಇಲಾಖೆಗಳ ಅಧಿಕಾರಿಗಳು, ಫಲಾನುಭವಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಸಾವಿರ ವರ್ಷದ ಬಳಿಕ ಜಿನ ಮಂದಿರ ನಿರ್ಮಾಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ಹೊಯ್ಸಳರ ಕಾಲದಲ್ಲಿ ನಿರ್ಮಾಣವಾದ ಜಿನ ಮಂದಿರಗಳು ಕಾರಣಾಂತರಗಳಿಂದ ನಾಶವಾದ ನಂತರ ಹೊಯ್ಸಳರ ನಾಡಿನಲ್ಲಿ ಪ್ರಥಮ ಬಾರಿಗೆ 1000 ವರ್ಷದ ನಂತರ ಭವ್ಯವಾದ ಜಿನ ಮಂದಿರ ನಿರ್ಮಾಣ ಆಗುತ್ತಿರುವುದು ವಿಶೇಷ ಎಂದು ತೀರ್ಥೋದ್ಧಾರಕ ಯುವಸಂತ ವೀರಸಾಗರ ಮುನಿ ಮಹಾರಾಜರು ಹೇಳಿದರು.

ಜೈನರಗುತ್ತಿಯಲ್ಲಿ ನಡೆದ ನೂತನ ಜಿನ ಮಂದಿರದ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮವಸರಣದಲ್ಲಿ ಸಕಲ ಜೀವಿಗಳಿಗೂ ಆಸರೆ ದೊರಕಿದೆ. ನೀನು ಬದುಕು ಇತರರನ್ನು ಬದುಕಲು ಬಿಡು ಎಂದು ಜೈನ ಧರ್ಮ ಹೇಳುತ್ತದೆ. ಜೈನರ ಗುತ್ತಿ ಕ್ಷೇತ್ರದ ಸುತ್ತ ವಿವಿಧ ಪ್ರಾಣಿ ಪಕ್ಷಿಗಳು ನೆಲೆಸಿವೆ. ರಾಷ್ಟ್ರೀಯ ಪಕ್ಷಿ ನವಿಲು ಗರಿ ಬಿಚ್ಚಿ ನರ್ತಿಸುವ ದೃಶ್ಯವನ್ನು ಒಮ್ಮೊಮ್ಮೆ ಕಾಣಬಹುದು ಎಂದು ವೀರ ಸಾಗರ ಮುನಿ ಮಹಾರಾಜ್ ಹೇಳಿದರು.

ಸೊಂದಾಮಠದ ಭಟ್ಟಾರಕ ಪಟ್ಟಚಾರ್ಯವರ್ಯ ಸ್ವಾಮೀಜಿ ಮಾತನಾಡಿ, ಹೊಯ್ಸಳರ



ಸಾಮ್ರಾಜ್ಯದ ಈಗಿನ ಜೈನರಗುತ್ತಿಯಲ್ಲಿ ಸಂಭವಿಸಿದ ಜ್ವಾಲಾಮುಖಿಯನ್ನು ತಣಿಸಲು ರಾಜ ವೀರಬಲ್ಲಾಳನಿಗೆ ಸವಾಲಾಗಿದ್ದ ಸಂದರ್ಭದಲ್ಲಿ ಶ್ರವಣಬೆಳಗೊಳದಿಂದ ಕೂಶ್ಮಾಂಡಿನಿ ಮಾತೆಯನ್ನು ಕರೆತಂದು ಪೂಜೆ ನೆರವೇರಿಸಿದ ನಂತರ ಜ್ವಾಲಾಮುಖಿ ಶಮನವಾಯಿತು. ಹೀಗಾಗಿ ನಿರ್ಮಾಣ ಆಗಲಿರುವ ತ್ರಿಕೂಟ ಜಿನ ಮಂದಿರದಲ್ಲಿ ಕೂಶ್ಮಾಂಡಿನಿ ಮಾತೆಯ ಮೂರ್ತಿ ಪ್ರತಿಷ್ಠಾಪನೆ ನಡೆಯಲಿದೆ ಎಂದರು.

ನರಸಿಂಹರಾಜಪುರ ಬಸ್ತಿಮಠದ ಲಕ್ಷ್ಮಸೇನ ಭಟ್ಟಾರಕ ಸ್ವಾಮೀಜಿ ಮಾತನಾಡಿ, ತೆರಿಗೆ ಪಾವತಿಯಲ್ಲಿ ಹೆಚ್ಚಿನ ಪಾಲು ಜೈನರು ಕೊಡುತ್ತಿದ್ದಾರೆ. ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ ಕರ್ನಾಟಕ ಶ್ರೀಮಂತವಾಗಲು ಜೈನರ ಕಾಣಿಕೆ ಹೆಚ್ಚಾಗಿದೆ. ಆದರೆ ಜೈನರಿಗೆ ವಿಶೇಷ ಅನುದಾನ ದೊರಕುತ್ತಿಲ್ಲ. ಸರ್ಕಾರ ಜೈನರಿಗೆ ಉದ್ಯೋಗವಕಾಶ, ಆರೋಗ್ಯ ಶಿಕ್ಷಣ ಸೇವೆ ಕೊಡಬೇಕು ಎಂದರು.

ಜೈನರಗುತ್ತಿಯಲ್ಲಿ ಅಂದಾಜು 2 ಕೋಟಿ ರೂ. ವೆಚ್ಚದ ಪದ್ಮಾವತಿ ಮಾತೆ, ಕೂಶ್ಮಾಂಡಿನಿ ಮಾತೆ, ಜ್ವಾಲಮಾಲಿನಿ ಮಾತೆಯ ಮೂರು ಗರ್ಭಗುಡಿಯ ಜಿನ ಮಂದಿರ ನಿರ್ಮಿಸಲಾಗುವುದು. ಸಮಸ್ತ ಕರ್ನಾಟಕ ಜೈನ ಬಾಂಧವರು ಕೈಜೋಡಿಸಬೇಕು ಎಂದು ಜೈನರಗುತ್ತಿ ಟ್ರಸ್ಟ್ ನಿರ್ದೇಶಕ ನೇಮಿರಾಜ ಆರಿಗ ಘೋಷಿಸಿದರು.

ಚೈತ್ಯಾಲಯ ನಿರ್ಮಾಣದ ದಾನಿಗಳಾದ ಸೂರಜ್ ಮಲ್ ಜೈನ್, ಪ್ರವೀಣ್ ಜೀ ಜೈನ್ ಅವರನ್ನು ಗೌರವಿಸಲಾಯಿತು. ಹೊರನಾಡಿನ ಜಯಶ್ರೀ ಧರಣೇಂದ್ರ ಜಿನ ಗಾಯನ ಸುಧೆ ಹರಿಸಿದರು. ಮೈಸೂರಿನ ಕುಮುಧ ನಾಗಭೂಷಣ ಕಾರ್ಯಕ್ರಮ ನಿರ್ವಹಿಸಿದರು.

ಮಾಧ್ಯಮ ಸೇವಾ ರತ್ನ ಪ್ರಶಸ್ತಿ ಪುರಸ್ಕೃತ ಪತ್ರಕರ್ತ ಎಚ್.ಎಸ್. ಅನಿಲ್ ಕುಮಾರ್ ಅವರನ್ನು ಅಭಿನಂದಿಸಿದರು.

ಬೀಜ ಮತ್ತು ಸಾವಯವ ಕೃಷಿ ನಿಗಮ ಅಧ್ಯಕ್ಷೆ ಲಾವಣ್ಯ ಬಲ್ಲಾಳ್, ಶೀತಲನಾಥ ದಿಗಂಬರ ಜೈನ ಟ್ರಸ್ಟ್ ಅಧ್ಯಕ್ಷ ಅಡಗೂರು ಶಶಿಕುಮಾರ್, ಕಾರ್ಯದರ್ಶಿ ಹೊಸದುರ್ಗ ಬ್ರಹ್ಮಪಾಲ್ ಜೈನ್, ನಿರ್ದೇಶಕರಾದ ನೇಮಿರಾಜ ಆರಿಗ, ಧವನ್ ಜೈನ್, ನಾಗಚಂದ್ರ, ಕೀರ್ತಿ ಕುಮಾರ್, ದೇವೇಂದ್ರ ಹೊಂಗೇರಿ, ಪದ್ಮಿಣಿ ಪದ್ಮರಾಜ, ನಾಗಶ್ರಿ ಮುಪ್ಪಾನೆ, ನಾಗೇಂದ್ರ ಕುಮಾ್ರ ಜಯೇಂದ್ರ ಕುಮಾರ್, ಆದೇಶ್ ದಂಡಾವತಿ, ಧರಣೇಂದ್ರ ಗುಬ್ಬಿ ಪಾಲ್ಗೊಂಡಿದ್ದರು.

# ಜಂತರ್-ಮಂತರ್ ಪ್ರತಿಭಟನೆಗೆ ಬಿಜೆಪಿ ಆಕ್ರೋಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ಕಾಕ್ರೋಚ್ ಜನತಾ ಪಾರ್ಟಿ, ಕಾಂಗ್ರೆಸ್ ಹಾಗೂ ಎಡಪಕ್ಷಗಳು ನಡೆಸುತ್ತಿರುವ ಪ್ರತಿಭಟನೆಯು ದೇಶದಲ್ಲಿ ಅರಾಜಕತೆ ಸೃಷ್ಟಿಯ ಭಾಗವಾಗಿದೆ ಎಂದು ಆರೋಪಿಸಿ ನೇಷನ್ ಫಾರ್ ಯೂತ್ ಹಾಗೂ ಜಿಲ್ಲಾ ಬಿಜೆಪಿಯಿಂದ ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಬಿಜೆಪಿ ಅಧ್ಯಕ್ಷ ಸಿದ್ದೇಶ್ ನಾಗೇಂದ್ರ, ಮಾತನಾಡಿ, ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣವನ್ನು ಕೇಂದ್ರ ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿದೆ ಎಂದು ಹೇಳಿದರು. ಆರೋಪಿಗಳನ್ನು ಶಿಕ್ಷಿಸುವ ಉದ್ದೇಶದಿಂದ ತ್ವರಿತ ನ್ಯಾಯ ಒದಗಿಸಲು ವಿವಿಧ ರಾಜ್ಯಗಳಲ್ಲಿ ಫಾಸ್ಟ್ ಟ್ರ್ಯಾಕ್ ನ್ಯಾಯಾಲಯಗಳನ್ನು ರಚಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಪ್ರಕರಣದಲ್ಲಿ ಯಾರು ತಪ್ಪಿತಸ್ಥರಾಗಿದ್ದರೂ, ಅವರು ಎಷ್ಟೇ ಪ್ರಭಾವಿಗಳಾಗಿದ್ದರೂ ಕಾನೂನಿನ ಮುಂದೆ ಉತ್ತರಿಸಬೇಕಾಗುತ್ತದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅನ್ಯಾಯವಾಗದಂತೆ ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದೆ ಎಂದು ತಿಳಿಸಿದರು. ನೀಟ್ ವಿಷಯವನ್ನು



ರಾಜಕೀಯ ಉದ್ದೇಶಕ್ಕಾಗಿ ಬಳಸಿಕೊಂಡು ಕೆಲವು ಸಂಘಟನೆಗಳು ವಿದ್ಯಾರ್ಥಿಗಳನ್ನು ದಾರಿ ತಪ್ಪಿಸುತ್ತಿವೆ ಎಂದು ಆರೋಪಿಸಿದ ಅವರು, ಪ್ರತಿಭಟನೆಯಲ್ಲಿ ಭಾಗವಹಿಸಿರುವ ಹಲವರಿಗೆ ನೀಟ್ ಪರೀಕ್ಷೆಯ ಕುರಿತು ಸಮಗ್ರ ಮಾಹಿತಿ ಇಲ್ಲ ಎಂಬುದು ಮಾಧ್ಯಮಗಳ ಸಂದರ್ಶನದಲ್ಲೇ ಬಹಿರಂಗವಾಗಿದೆ ಎಂದು ಹೇಳಿದರು. ಮಳೆಗಾಲದ ಸಂಸತ್ ಅಧಿವೇಶನದ ಸಂದರ್ಭದಲ್ಲಿ ಆರೋಗ್ಯಕರ ಚರ್ಚೆ ನಡೆಯಬೇಕಾದರೆ, ಉದ್ದೇಶಪೂರ್ವಕವಾಗಿ ಗೊಂದಲ ಸೃಷ್ಟಿಸಿ ಸಂಸತ್ ಕಾರ್ಯವನ್ನು ಅಸ್ತವ್ಯಸ್ತಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ದೂರಿದರು.

ಶಾಸಕ ಸಿಮೆಂಟ್ ಮಂಜು ಮಾತನಾಡಿ, ದೇಶದ ಪ್ರಜಾಪ್ರಭುತ್ವದ ದೇವಾಲಯವೆಂದೇ ಕರೆಯಲ್ಪಡುವ ಸಂಸತ್ ಭವನದ ಮೇಲೆ ದಾಳಿ ನಡೆಸುವುದು ಅಥವಾ ಅದರ ಕಾರ್ಯಕ್ಕೆ ಅಡ್ಡಿಪಡಿಸುವುದು ಅತ್ಯಂತ ಖಂಡನೀಯ ಕೃತ್ಯವಾಗಿದೆ ಎಂದರು. ಪ್ರತಿಭಟನೆ ನಡೆಸುವ ಹಕ್ಕು ಎಲ್ಲರಿಗೂ ಇದ್ದರೂ ಅದು ರಾಷ್ಟ್ರದ ಗೌರವಕ್ಕೆ ಧಕ್ಕೆ ತರುವ ರೀತಿಯಲ್ಲಿ ಇರಬಾರದು ಎಂದು ಹೇಳಿದರು.

ನೀಟ್ ಅಕ್ರಮ ಪ್ರಕರಣದಲ್ಲಿ ತಪ್ಪಿತಸ್ಥರನ್ನು ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರ ಮುಂದಾಗಿದೆ. ವಿದ್ಯಾರ್ಥಿಗಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಅಗತ್ಯವಿದ್ದಲ್ಲಿ ಮರುಪರೀಕ್ಷೆಯಂತಹ ಕ್ರಮಗಳನ್ನೂ ಕೈಗೊಂಡಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಯುವಜನರ ಹಿತಾಸಕ್ತಿಗೆ ಆದ್ಯತೆ ನೀಡಿ ನಿರಂತರವಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಕೆಲವು ವಿರೋಧ ಪಕ್ಷಗಳು ವಿದ್ಯಾರ್ಥಿಗಳನ್ನು ಉದ್ದೇಶಪೂರ್ವಕವಾಗಿ ದಾರಿ ತಪ್ಪಿಸಿ ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿವೆ ಎಂದು ಆರೋಪಿಸಿದರು.

ಭಜರಂಗದಳದ ಜಿಲ್ಲಾ ಪ್ರಮುಖ ಜೀವನ್ ಮಾತನಾಡಿ, ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಗಳ ಹೆಸರಿನಲ್ಲಿ ದೇಶದ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡಲಾಗುತ್ತಿದೆ ಎಂದು ಆರೋಪಿಸಿದರು. ಒಬ್ಬ ವ್ಯಕ್ತಿ ಮಾಡಿದ ತಪ್ಪಿಗೆ ಇಡೀ ವ್ಯವಸ್ಥೆ ಅಥವಾ ಕೇಂದ್ರ ಸರ್ಕಾರವನ್ನು ದೂಷಿಸುವುದು ಸರಿಯಲ್ಲ. ತನಿಖೆ ನಡೆಯುತ್ತಿರುವ ಸಂದರ್ಭದಲ್ಲಿ ವಿದ್ಯಾರ್ಥಿಗಳಲ್ಲಿ ಗೊಂದಲ ಮೂಡಿಸುವ ಕೆಲಸವನ್ನು ಕೆಲವರು ಮಾಡುತ್ತಿದ್ದಾರೆ ಎಂದು ಹೇಳಿದರು.

ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಮಹಿಳಾ ಮೋರ್ಚಾ ಅಧ್ಯಕ್ಷೆ ನೇತ್ರಾವತಿ ಮಂಜುನಾಥ್, ಶೋಭನ್ ಬಾಬು, ಹರ್ಷಿತ್, ವೇದವತಿ, ಆರ್. ಮೋಹನ್, ರಾಹುಲ್ ಕಿಣಿ, ರಾಜಕುಮಾರ್, ವಿಶಾಲಾಕ್ಷಿ ಸೇರಿದಂತೆ ಪಕ್ಷದ ವಿವಿಧ ಮೋರ್ಚಾಗಳ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಯುವಕರು ಭಾಗವಹಿಸಿದ್ದರು.

# ಸೂಚನೆ ನೀಡದೆ ಯಂತ್ರ ಆನ್: ಗಂಭೀರ ಗಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರೋಟರ್ ಫೀಡರ್‌ಗೆ ಸಿಬ್ಬಂದಿಯ ಕೈ ಸಿಲುಕಿ ಎಡಗೈ ಬೆರಳ ಮೂಳೆಗಳು ಮುರಿದಿರುವ ಘಟನೆ ನಗರದ ಕೆಎಂಎಫ್ ಪೀಡ್ ಫ್ಯಾಕ್ಟರಿಯಲ್ಲಿ ನಡೆದಿದೆ.

ತಾಲ್ಲೂಕಿನ ಮುತ್ತಿಗೆ ಹೀರೆಹಳ್ಳಿ ಗ್ರಾಮದ ಪ್ರಸಾದ್ ಗಾಯಾಳು. ಹತ್ತು ವರ್ಷಗಳಿಂದ ಫ್ಯಾಕ್ಟರಿಯಲ್ಲಿ ಟೆಕ್ನಿಷಿಯನ್ ಆಗಿ ಕೆಲಸ ಮಾಡುತ್ತಿದ್ದಾರೆ. ಬುಧವಾರ ಮಧ್ಯಾಹ್ನ ಪ್ಯಾಲೇಟ್ ಮಿಲ್‌ನ ಬ್ಯಾಗಿಂಗ್ ಮಿಷನ್ ವಿಭಾಗದಲ್ಲಿ ರೋಟರ್ ಪೀಡರ್ ಕ್ಲೀನಿಂಗ್ ಮಾಡುತ್ತಿದ್ದಾಗ ಏಕಾಏಕಿ ಯಂತ್ರ ಆನ್ ಆಗಿದ್ದರಿಂದ ಅವಘಡ ಸಂಭವಿಸಿದೆ. ಪ್ರೊಡಕ್ಷನ್ ಉಸ್ತುವಾರಿ ಅನಿಲ್ ಅವರು ರಿಪೇರಿ ಮಾಡಿಸುತ್ತಿದ್ದರು. ಮೇಲ್ವಿಚಾರಕ ಅಶ್ವತ್ ಕುಮಾರ್ ಅವರು ಯಂತ್ರವನ್ನು ಆಫ್ ಮಾಡಿಸಿದೆ ಕ್ಲೀನಿಂಗ್ ಮಾಡಿಕೊಳ್ಳಿ ಎಂದು ತಿಳಿಸಿದ್ದರಿಂದ ರೋಟರ್ ಪೀಡರ್ ಕೆಲಸ ಮಾಡುತ್ತಿದ್ದರು. ಈ ವೇಳೆ ಯಾವ ಸೂಚನೆ ನೀಡದೆ ಹಾಗು ಮುಂಜಾಗ್ರತಾ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯದಿಂದ ಮಿಷನ್‌ನ ಸ್ವಿಚ್ ಆನ್ ಮಾಡಿಸಿದ್ದರಿಂದ ಯಂತ್ರ ಚಾಲನೆಗೊಂಡು ಎಡಗೈ ಸಿಲುಕಿ ಮುಂಗೈ ಮತ್ತು ಬೆರಳುಗಳಿಗೆ ಗಾಯವಾಗಿದೆ. ಪ್ರಸಾದ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಿದ್ಯಾರ್ಥಿಗಳ ಪ್ರತಿಭಟನೆಗೆ ಸಂಘಟನೆಗಳ ಬೆಂಬಲ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ನೀಟ್ ಅಕ್ರಮ ಖಂಡಿಸಿ ನವದೆಹಲಿಯ ಜಂತರ್-ಮಂತರ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆ ಬೆಂಬಲಿಸಿ ವಿವಿಧ ಸಂಘಟನೆಗಳು ಹಾಗೂ ವಿದ್ಯಾರ್ಥಿಗಳು ಕೇಂದ್ರ ಸರ್ಕಾರದ ವಿರುದ್ಧ ಶುಕ್ರವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ಮಿನಿ ವಿಧಾನಸೌಧದ ಮುಂಭಾಗ ಜಮಾಯಿಸಿದ ಸಿಐಟಿಯು, ಕೆಪಿಆರ್‌ಎಸ್, ವಿದ್ಯಾರ್ಥಿಗಳ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ದಲಿತ ಜನಪರ ಚಳವಳಿಗಳ ಒಕ್ಕೂಟ ಪದಾಧಿಕಾರಿಗಳು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳ ಮೇಲೆ ಅಮಾನವೀಯವಾಗಿ ಲಾಠಿಚಾರ್ಜ್ ಮಾಡಿ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸಲಾಗುತ್ತಿದೆ. ಕೇಂದ್ರ





ಸರ್ಕಾರ, ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಜವಾಬ್ದಾರಿ ಮರೆತು ವರ್ತಿಸುತ್ತಿದ್ದಾರೆ. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ನ್ಯಾಯ ಸಿಗಬೇಕು. ಅದಕ್ಕಾಗಿ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಕೊಡಬೇಕು. ಪ್ರಧಾನಿ ಮೋದಿ ದೇಶದ ಜನರ ಕ್ಷಮೆ ಕೇಳಬೇಕೆಂದು ಒತ್ತಾಯಿಸಿದರು.

ಸಿಐಟಿಯು ಮುಖಂಡ ಹೆಚ್.ಎಸ್.ಮಂಜುನಾಥ್ ಮಾತನಾಡಿ, ಕೇಂದ್ರ ಸರ್ಕಾರ ವ್ಯವಸ್ಥಿತವಾಗಿ ನೀಟ್ ಪರೀಕ್ಷೆ ನಡೆಸುವಲ್ಲಿ ವಿಫಲವಾಗಿದೆ. ಅದರಿಂದ ಹಲವು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತ ವಿದ್ಯಾರ್ಥಿಗಳ ಕುಟುಂಬಕ್ಕೆ ಸರ್ಕಾರ ಪರಿಹಾರ ನೀಡಬೇಕು. ಅಲ್ಲದೇ ಕೇಂದ್ರ ಶಿಕ್ಷಣ ಸಚಿವರನ್ನು ಸಂಪುಟದಿಂದ ಕೈಬಿಡಬೇಕು. ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡಿರುವ ಸರ್ಕಾರ ಹಠಮಾರಿ ಧೋರಣೆಯನ್ನು ಕೈಬಿಟ್ಟಿಲ್ಲ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಿಲ್ಲ. ದೇಶದ ಯುವಜನರ ಭವಿಷ್ಯದ ಕನಸುಗಳನ್ನು ಚಿವುಟುವ ಕಾರ್ಯವನ್ನು ಬಿಜೆಪಿ ನೇತೃತ್ವದ ಸರ್ಕಾರ ಮಾಡಿದೆ. ಇದನ್ನೆಲ್ಲಾ ಗಮನಿಸುತ್ತಿರುವ ಜನರು ಮುಂಬರುವ ದಿನಗಳಲ್ಲಿ ಬಿಜೆಪಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ವಳಗೆರಹಳ್ಳಿ ರಾಮಚಂದ್ರ, ವಾಸು ಕಲ್ಕೆರೆ, ತೇಜಸ್ ಗೌಡ, ಸುಜಾತ ಕುಮಾರಸ್ವಾಮಿ, ರೈತ ಸಂಘದ ರವಿ ಗೌಡಯ್ಯ, ಶಂಕರಣ್ಣ ಬರಗೂರು, ರಘು ಹಿರಿಸಾವೆ ದಲಿತ ಸಂಘರ್ಷ ಸಮಿತಿಯ ದಂಡೋರ ಮಂಜುನಾಥ್, ಸತೀಶ, ಮಂಜು ಮತ್ತಿತರರಿದ್ದರು.

# ಟೈರ್ ಸ್ಫೋಟ: ಲಕ್ಷಾಂತರ ರೂ. ಮೌಲ್ಯದ ಬಿಯರ್ ಹಾನಿ



ಹಾಸನ: ತಾಲ್ಲೂಕಿನ ಚೀರನಹಳ್ಳಿ ಬಳಿ ಟೈರ್ ಸ್ಫೋಟಗೊಂಡು ಲಾರಿ ಪಲ್ಟಿಯಾದ ಪರಿಣಾಮ 20 ಲಕ್ಷ ರೂ. ಮೌಲ್ಯದ ಬಿಯರ್ ಬಾಟಲಿಗಳು ನೆಲಕ್ಕೆ ಬಿದ್ದು ಹಾನಿಯಾಗಿದೆ.

ನಗರದ ವುಡ್ ಪಿಕರ್ ಡಿಸ್ಟಿಲರೀಸ್‌ನಿಂದ ಕೊಪ್ಪಳಕ್ಕೆ ಬಿಯರ್ ಸಾಗಿಸುತ್ತಿದ್ದ ಲಾರಿ ಗ್ರಾಮದ ಬಳಿ ತೆರಳುತ್ತಿದ್ದ ವೇಳೆ ಏಕಾಏಕಿ ಟೈರ್ ಸ್ಫೋಟಗೊಂಡಿದೆ. 1,100 ಕೇಸ್‌ಗಳಷ್ಟು ಲೆಜೆಂಡ್, ರಾಯಲ್, ಪವರ್ ಕೂಲ್, ಸನ್ನಿ ಬೀಚಸ್ ಕಂಪನಿಯ ಬಿಯರ್‌ಗಳು ಬಾಟಲಿ, ಟಿನ್‌ಗಳು ರಸ್ತೆಯಲ್ಲೆಲ್ಲಾ ಚೆಲ್ಲಾಡಿವೆ. ಅದರಿಂದ ಒಂದು ಬದಿಯ ರಸ್ತೆ ಸಂಚಾರ ಸಂಪೂರ್ಣ ಬಂದ್ ಆಗಿತ್ತು. ಅದೃಷ್ಟವಶಾತ್ ಘಟನೆಯಲ್ಲಿ ಯಾವುದೇ ಪ್ರಾಣ ಹಾನಿಯಾಗಿಲ್ಲ. ಚಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಅಪಘಾತದ ಬೆನ್ನಲ್ಲೇ ಸ್ಥಳೀಯರು ನೂರಾರು ಬಿಯರ್ ಬಾಟಲಿಗಳನ್ನು ಹೊತ್ತೊಯ್ದಿದ್ದು, ಬಳಿಕ ಬಂದ ಪೊಲೀಸರು ಮಾರ್ಗವನ್ನು ಬಂದ್ ಮಾಡಿದ್ದಾರೆ. ಅಳಿದುಳಿದ ಬಾಟಲಿಗಳನ್ನು ಸಂಗ್ರಹಿಸಲು ಟ್ರಾನ್ಸ್‌ಪೋರ್ಟ್ ಸಿಬ್ಬಂದಿ ಹರಸಾಹಸ ಪಟ್ಟಿದ್ದಾರೆ.

# ದರ ಏರಿಕೆ ಬಿಸಿ: ಫಲಾನುಭವಿಗಳಿಗೆ ಕಡಿಮೆ ಮೊಟ್ಟೆ ವಿತರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಲ್ಲಿ ಪೂರಕ ಪೌಷ್ಟಿಕ ಆಹಾರ ಯೋಜನೆಯಡಿ ವಿತರಿಸಲಾಗುತ್ತಿದ್ದ ಮೊಟ್ಟೆ ಸಂಖ್ಯೆಯಲ್ಲಿ ಕಡಿತಗೊಳಿಸಿದ್ದು, ಫಲಾನುಭವಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಗರ್ಭಿಣಿ ಹಾಗೂ ಬಾಣಂತಿಯರಿಗೆ ಪ್ರತಿ ತಿಂಗಳು 25 ಮೊಟ್ಟೆ ನೀಡಲಾಗುತ್ತಿತ್ತು. ಆದರೆ ಇತ್ತೀಚೆಗೆ ಮೊಟ್ಟೆ ದರದಲ್ಲಿ ಏರಿಕೆಯಾಗಿರುವುದರಿಂದ ಪ್ರಮಾಣವನ್ನು 22ಕ್ಕೆ ಇಳಿಸಲಾಗಿದೆ. ಈ ಕಾರಣಕ್ಕಾಗಿ ಅನೇಕ ಅಂಗನವಾಡಿಗಳಲ್ಲಿ ಫಲಾನುಭವಿಗಳು ಮತ್ತು ಸಿಬ್ಬಂದಿ ನಡುವೆ ವಾಗ್ವಾದ ನಡೆಯುತ್ತಿವೆ. ಸರ್ಕಾರ ಮೊಟ್ಟೆ ವಿತರಣೆಗಾಗಿ ಪ್ರತಿ ಫಲಾನುಭವಿಗೆ 150 ರೂ. ನೀಡುತ್ತದೆ. ಪ್ರತಿ ಮೊಟ್ಟೆಗೆ 6 ರೂ. ಇದ್ದಾಗ ತಿಂಗಳಿಗೆ 25 ಮೊಟ್ಟೆ ನೀಡಬಹುದಿತ್ತು. ಆದರೆ ಈಗ ಮೊಟ್ಟೆ ಬೆಲೆ 7 ರಿಂದ 8 ರೂ.ಗೆ ಹೆಚ್ಚಿರುವುದರಿಂದ ಪ್ರಮಾಣ ಕಡಿಮೆ ಮಾಡಲಾಗಿದೆ. ಈ ಬಗ್ಗೆ ಬಾಲ ವಿಕಾಸ ಸಮಿತಿ ಸಭೆಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗಿದೆ. ಜಿಲ್ಲೆಯ 2691 ಅಂಗನವಾಡಿಗಳಲ್ಲೂ ಈ ನಿರ್ಣಯ ಕೈಗೊಳ್ಳಲಾಗಿದೆ. ಆದರೆ ಕೆಲವೆಡೆ ಸಾರ್ವಜನಿಕರು ಅಂಗನವಾಡಿ ಸಿಬ್ಬಂದಿ ಮೇಲೆಯೇ ಭ್ರಷ್ಟಾಚಾರದ ಆರೋಪ ಮಾಡುತ್ತಾ ಗಲಾಟೆಯ ಪ್ರಕರಣಗಳು ವರದಿಯಾಗಿವೆ. ಅರಸೀಕೆರೆ ತಾಲ್ಲೂಕಿನ ಬಾಣಾವರ, ಜಾವಗಲ್ ಹೋಬಳಿ ವ್ಯಾಪ್ತಿಯಲ್ಲಿ ಇಂತಹ ಘಟನೆಗಳು ನಡೆಯುತ್ತಿದ್ದು ಸಾರ್ವಜನಿಕರನ್ನು ಸಮಾಧಾನಪಡಿಸಲು ಅಧಿಕಾರಿಗಳು ಹರಸಾಹಸಪಡುತ್ತಿದ್ದಾರೆ. ಜಿಲ್ಲಾದ್ಯಂತ ಒಟ್ಟು 81,752 ಫಲಾನುಭವಿಗಳಿದ್ದಾರೆ.



**ಪೂರಕ ಪೌಷ್ಟಿಕ ಆಹಾರ ವಿವರ**

ಗರ್ಭಿಣಿ, ಬಾಣಂತಿ ಹಾಗೂ 6 ವರ್ಷದ ವರೆಗೆ ಮಗು ಆರೋಗ್ಯವಾಗಿರಬೇಕೆಂಬ ಉದ್ದೇಶದಿಂದ ಸರ್ಕಾರ ಪೂರಕ ಪೌಷ್ಟಿಕ ಆಹಾರ ವಿತರಣೆ ಯೋಜನೆ ಜಾರಿಗೊಳಿಸಿದೆ. ಅಂಗನವಾಡಿ ಕಾರ್ಯಕರ್ತೆಯರೇ ಮುತುವರ್ಜಿ ವಹಿಸಿ ತಮ್ಮ ವ್ಯಾಪ್ತಿಯ ಗರ್ಭಿಣಿ, ಬಾಣಂತಿಯರು ಹಾಗೂ ಮಕ್ಕಳನ್ನು ಗುರುತಿಸಿ ಅವರಿಗೆ ಪ್ರತಿ ತಿಂಗಳು ಸೌಲಭ್ಯ ಕಲ್ಪಿಸಬೇಕು. 3 ವರ್ಷದೊಳಗಿನ ಮಕ್ಕಳಿಗೆ ಪುಷ್ಟಿ ಪುಡಿ, ಹಾಲಿನ ಪುಡಿ, ಬೆಲ್ಲ ಹಾಗೂ ಅಪೌಷ್ಟಿಕತೆಯಿಂದ ಮಗು ಬಳಲುತ್ತಿದ್ದರೆ ವಾರದಲ್ಲಿ 3 ದಿನ ಮೊಟ್ಟೆ ನೀಡಲಾಗುತ್ತದೆ. ಮೂರು ವರ್ಷದಿಂದ ಆರು ವರ್ಷದೊಳಗಿನ ಮಗು ಅಂಗನವಾಡಿಗೆ ಬರಲಿದ್ದು ಅಂತಹವರಿಗೆ 150 ಮಿಲಿ ಲೀ. ಹಾಲು, ಮಿಲೆಟ್ ಲಡ್ಡು, ಅನ್ನ-ಸಾಂಬಾರು ಹಾಗೂ ಉಪ್ಪಿಟ್ಟು, ವಾರದಲ್ಲಿ ಎರಡು ದಿನ ಮೊಟ್ಟೆ ನೀಡಲಾಗುತ್ತದೆ. ಗರ್ಭಿಣಿ ಹಾಗೂ ಬಾಣಂತಿಯರಿಗೆ 1 ಕೆ.ಜಿ.ಅಕ್ಕಿ, 250 ಗ್ರಾಂ ಹೆಸರು ಕಾಳು, ಗೋಧಿ 750 ಗ್ರಾಂ, ಸಾಂಬಾರ್ ಪುಡಿ 125 ಗ್ರಾಂ, ಅರ್ಧ ಕೆ.ಜಿ. ಹಾಲಿನ ಪುಡಿ ಮತ್ತು 25 ಮೊಟ್ಟೆ ನೀಡಲಾಗುವುದು.

### ಪೂರಕ ಪೌಷ್ಟಿಕ ಆಹಾರ ಫಲಾನುಭವಿಗಳ ವಿವರ

**ಹಾಸನ : 15882**

**ಚನ್ನರಾಯಪಟ್ಟಣ : 11123**

**ಹೊಳೆನರಸೀಪುರ : 10884**

**ಬೇಲೂರು : 8237**

**ಸಕಲೇಶಪುರ : 6310**

**ಆಲೂರು : 4425**

**ಅರಸೀಕೆರೆ: 15138**

**ಅರಕಲಗೂಡು : 9753**

### ಸ್ಪಂದಿಸದ ಸರ್ಕಾರ ಬಗೆಹರಿಯದ ಸಮಸ್ಯೆ

ಮೊಟ್ಟೆ, ಬೇಳೆ ಪದಾರ್ಥಗಳ ಬೆಲೆ ಗಗನಕ್ಕೇರಿದ್ದರೂ ಸರ್ಕಾರ ಅದಕ್ಕೆ ಅನುಗುಣವಾಗಿ ಹಣ ನೀಡದೆ ಇರುವುದು ಬಗೆಹರಿಸಲಾಗದ ಸಮಸ್ಯೆಯಾಗಿ ಕಾಡುತ್ತಿದೆ.

ಫಲಾನುಭವಿಗಳ ಸಂಖ್ಯೆಗೆ ಅನುಗುಣವಾಗಿ ನಿಗದಿತ ಹಣ ಮಾತ್ರ ಅಂಗನವಾಡಿಗಳಿಗೆ ದೊರೆಯುತ್ತದೆ. ಪ್ರತಿ ಮೊಟ್ಟೆ ದರ 2 ರೂ. ಏರಿಕೆಯಾಗಿರುವುದರಿಂದ ನಿಯಮದಂತೆ ಫಲಾನುಭವಿಗಳಿಗೆ ತಿಂಗಳಿಗೆ 25 ಮೊಟ್ಟೆ ವಿತರಿಸಲು ಆಗುತ್ತಿಲ್ಲ. ಕೆಲವರು ವಾಸ್ತವ ಸ್ಥಿತಿ ಅರಿತು ಸುಮ್ಮನಾದರೆ ಮತ್ತೆ ಕೆಲವರು ಅಂಗನವಾಡಿ ಸಿಬ್ಬಂದಿ ವಿರುದ್ಧವೇ ಅವ್ಯವಹಾರದ ಆರೋಪ ಮಾಡುತ್ತಿದ್ದಾರೆ. ಇಂತಹ ಸಮಸ್ಯೆಗಳು ಜಿಲ್ಲೆಯ ಹಲವೆಡೆ ಕೇಳಿಬಂದಿದೆ. ಅದರಿಂದ ಅಂಗನವಾಡಿ ಸಿಬ್ಬಂದಿ ಕೂಡ ನಿಸ್ಸಹಾಯಕರಾಗಿದ್ದಾರೆ. ಪ್ರಸ್ತುತ ಮಾರುಕಟ್ಟೆ ಬೆಲೆ ಆಧರಿಸಿ ಹಣ ನೀಡಬೇಕೆಂಬ ಆಗ್ರಹ ಕೇಳಿಬಂದಿದೆ. ಈ ಬಗ್ಗೆ ಅಂಗನವಾಡಿ ನೌಕರರು ಸರ್ಕಾರಕ್ಕೆ ಪತ್ರ ಬರೆದರೂ ಸಕಾರಾತ್ಮಕ ಸ್ಪಂದನೆ ಸಿಕ್ಕಿಲ್ಲ.

# ಎ.ಟಿ.ಆರ್. ರಾಜಕಾರಣಕ್ಕೆ ಬರಬೇಕು: ಅಭಿಯಾನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಸಕ್ರಿಯ ರಾಜಕಾರಣದಿಂದ ಬೇಸತ್ತು ಹಿಂದೆ ಸರಿದಿದ್ದ ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಅವರು ಜನರ ಏಳಿಗೆ ದೃಷ್ಟಿಯಿಂದ ರಾಜಕಾರಣಕ್ಕೆ ಬರಬೇಕೆಂದು ಅವರ ಅಭಿಮಾನಿಗಳು ಹಾಗೂ ಹಿತೈಷಿಗಳು ಆಗ್ರಹಿಸಿದ್ದಾರೆ.

ತಾಲ್ಲೂಕಿನ ಅಭಿವೃದ್ಧಿ, ರೈತರ ಹಾಗೂ ಬಡವರ ಹಿತದೃಷ್ಟಿಯಿಂದ ಮತ್ತೆ ರಾಜಕೀಯ ಅಖಾಡಕ್ಕೆ ಮರಳಬೇಕೆಂದು ರಾಮನಾಥಪುರದ ಪ್ರವಾಸಿ ಮಂದಿರ ಆವರಣದಲ್ಲಿ ಗುರುವಾರ ನಡೆದ ಎ.ಟಿ. ರಾಮಸ್ವಾಮಿ ಅಭಿಮಾನಿ ಬಳಗದ ಹೋಬಳಿ ಮಟ್ಟದ ಕಾರ್ಯಕರ್ತರ ಸಭೆಯಲ್ಲಿ ಒತ್ತಾಯ ಕೇಳಿಬಂದಿತು.

ಅಭಿಮಾನಿ ಬಳಗದ ಸದಸ್ಯ ದಿವಾಕರ್ ಮಾತನಾಡಿ, ಎ.ಟಿ.ರಾಮಸ್ವಾಮಿ ಅವರು ಶಾಸಕರಾಗಿದ್ದ ಅವಧಿಯಲ್ಲಿ ಅಭಿವೃದ್ಧಿಗೆ ಹೊಸ ದಿಕ್ಕು ನೀಡಿದ್ದರು. ಜನಪರ ರಾಜಕಾರಣದ ಮೂಲಕ ರೈತರು, ಬಡವರು ಹಾಗೂ ಸಾಮಾನ್ಯ ಜನರ ವಿಶ್ವಾಸ ಗಳಿಸಿದ್ದರು. ಇಂತಹ ನಾಯಕತ್ವ ತಾಲ್ಲೂಕಿಗೆ ಅಗತ್ಯವಾಗಿದೆ. ಆದ್ದರಿಂದ ಅವರು ಮತ್ತೆ ಸಕ್ರಿಯ ರಾಜಕಾರಣಕ್ಕೆ ಬರಲೇಬೇಕೆಂದು ಒತ್ತಾಯಿಸಿದರು.

ಮುಂದಿನ ದಿನಗಳಲ್ಲಿ ತಾಲ್ಲೂಕಿನ ಎಲ್ಲಾ ಹೋಬಳಿಗಳ ಅಭಿಮಾನಿಗಳು, ಹಿತೈಷಿಗಳು ಹಾಗೂ ಬೆಂಬಲಿಗರನ್ನು ಒಗ್ಗೂಡಿಸಿ ರಾಮಸ್ವಾಮಿ ಅವರನ್ನು ಭೇಟಿ ಮಾಡಿ ಮತ್ತೆ ರಾಜಕೀಯಕ್ಕೆ ಮರಳುವಂತೆ ಮನವಿ ಸಲ್ಲಿಸುವ ನಿರ್ಧಾರವನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

ರಾಮನಾಥಪುರದಲ್ಲಿ ನಡೆದ ಈ ಸಭೆ ಎ.ಟಿ.ರಾಮಸ್ವಾಮಿ ಅವರ ರಾಜಕೀಯ ಮರುಪ್ರವೇಶದ ಚರ್ಚೆಗೆ ಹೊಸ ವೇದಿಕೆ ಕಲ್ಪಿಸಿದ್ದು, ಮುಂದಿನ ದಿನಗಳಲ್ಲಿ ಈ ಅಭಿಯಾನ ತಾಲ್ಲೂಕು ಮಟ್ಟದಲ್ಲಿ ಮತ್ತಷ್ಟು ಚುರುಕುಗೊಳ್ಳುವ ಸಾಧ್ಯತೆ ಇದೆ.

ಸಭೆಯಲ್ಲಿ ಉಪ್ಪರಿಕೆಗೌಡ, ರಾಮೇಗೌಡ, ವಿರೂಪಾಕ್ಷ, ಬಿ.ಸಿ.ವೀರೇಶ್, ಪುಟ್ಟರಾಜೇಗೌಡ, ಮಹೇಶ್, ಮಹದೇವ್, ಶಿವೇಗೌಡ, ಶಂಕರೇಗೌಡ, ಗಂಗಾಧರ್, ತಿಪ್ಪೇಗೌಡ, ಸಣ್ಣೇಗೌಡ, ಸ್ವಾಮಿಗೌಡ, ಬಿ.ಸಿ.ಹೊನ್ನೇಗೌಡ ಮತ್ತಿತರರಿದ್ದರು.

# ಗೊಬ್ಬಳಿಯಲ್ಲಿ ಹೈನುಗಾರಿಕೆ ತರಬೇತಿ ಕಾರ್ಯಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಇಲ್ಲಿನ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ವತಿಯಿಂದ ಬಸವಾಪಟ್ಟಣ ವಲಯದ ಕಟ್ಟೆಪುರ ಕಾರ್ಯ ಕ್ಷೇತ್ರದ ಗೊಬ್ಬಳಿ ಗ್ರಾಮದಲ್ಲಿ ಕೃಷಿ ಹಾಗೂ ಹೈನುಗಾರಿಕೆ ಕುರಿತು ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಪಶು ವೈದ್ಯಾಧಿಕಾರಿ ಡಾ. ಚಿರಂಜೀವಿ ಮಾತನಾಡಿ, ಹೈನುಗಾರಿಕೆಯಲ್ಲಿ ಯಶಸ್ಸು ಸಾಧಿಸಲು ಅನುಸರಿಸಬೇಕಾದ ಕ್ರಮ, ಪಶುಗಳಲ್ಲಿ ಕಾಣಿಸಿಕೊಳ್ಳುವ ವಿವಿಧ ರೋಗಗಳ ತಡೆಗಟ್ಟುವಿಕೆ,



ಸಮರ್ಪಕ ಆಹಾರ ಪದ್ಧತಿ, ಪಶುಗಳಿಗೆ ಸಮಯೋಚಿತ ಚಿಕಿತ್ಸೆ ನೀಡುವ ಅಗತ್ಯತೆ ಹಾಗು ಉತ್ತಮ ತಳಿಯ ಹಸುಗಳನ್ನು ಆಯ್ಕೆ ಮಾಡುವ ವಿಧಾನಗಳ ಕುರಿತು ಮಾಹಿತಿ ನೀಡಿದರು. ವೈಜ್ಞಾನಿಕ ಪದ್ಧತಿಯಲ್ಲಿ ಹೈನುಗಾರಿಕೆ ನಡೆಸಿದರೆ ರೈತರು ಆದಾಯ ಗಳಿಸಬಹುದು ಎಂದರು.

ಸಂಸ್ಥೆಯ ಕೃಷಿ ಮೇಲ್ವಿಚಾರಕ ಎಂ. ಸುನೀಲ್ ಕುಮಾರ್ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಆಯೋಜಿಸುತ್ತಿರುವ ವಿವಿಧ ತರಬೇತಿಗಳನ್ನು ರೈತರು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಫಸಲ್ ಭೀಮಾ ಯೋಜನೆ ಬೆಳೆ ವಿಮೆ ಮಾಡಿಸುವುದರಿಂದ ಆಗುವ ಪ್ರಯೋಜನ ಹಾಗು ಬೆಳೆ ನಷ್ಟದ ಸಂದರ್ಭದಲ್ಲಿನ ಪರಿಹಾರದ ಕುರಿತು ಮಾಹಿತಿ ನೀಡಿದರು.

ಗ್ರಾಮದ ಮುಖಂಡ ಶ್ರೀನಿವಾಸ್ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಗ್ರಾಮದಲ್ಲಿ ಅನೇಕ ಕುಟುಂಬಗಳು ಹಾಗು ಮಹಿಳೆಯರು ಆರ್ಥಿಕವಾಗಿ ಸಬಲರಾಗಿದ್ದು, ಯೋಜನೆಯ ವಿವಿಧ ಕಾರ್ಯಕ್ರಮಗಳು ಜನರಿಗೆ ಅತ್ಯಂತ ಉಪಯುಕ್ತವಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರಾಮದ ಮಂಜೇಗೌಡ, ಬಸವಾಪಟ್ಟಣ ವಲಯದ ಮೇಲ್ವಿಚಾರಕಿ ರಾಧಾ, ಕಟ್ಟೆಪುರ ಕಾರ್ಯಕ್ಷೇತ್ರದ ಸೇವಾಪ್ರತಿನಿಧಿ ಉಷಾ, ಗ್ರಾಮದ ರೈತರು ಹಾಗು ವಿವಿಧ ಸ್ವಸಹಾಯ ಸಂಘಗಳ ಸದಸ್ಯರು ಇದ್ದರು.

# ನಿಯಮ ಉಲ್ಲಂಘನೆ ಮದ್ಯದಂಗಡಿಗಳ ಪರಿಶೀಲನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಮದ್ಯ ಮಾರಾಟ ಮಳಿಗೆಗಳ ಮೇಲೆ ದಿಢೀರ್ ದಾಳಿ ನಡೆಸಿದ ಅಬಕಾರಿ ಆಯುಕ್ತೆ ಡಿ.ರೂಪ ನೇತೃತ್ವದ ತಂಡ ನಿಯಮ ಪಾಲಿಸದ ಹಿನ್ನೆಲೆಯಲ್ಲಿ 11 ಮದ್ಯದಂಗಡಿಗಳ ವಿರುದ್ಧ ದೂರು ದಾಖಲಿಸಿದೆ.

ಸರ್ಕಾರದ ಆದೇಶದಂತೆ ಮದ್ಯದಂಗಡಿಗಳ ನಿರ್ವಹಣೆಯಲ್ಲಿನ ಲೋಪದೋಷಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗಿದೆ. ತಾಲ್ಲೂಕಿನಲ್ಲಿ ಒಟ್ಟು 43 ಅಬಕಾರಿ ಪರವಾನಗಿ ಪಡೆದ ಮದ್ಯ ಮಾರಾಟದ ಅಂಗಡಿಗಳಿವೆ. ಅವುಗಳಲ್ಲಿ 11 ಮಳಿಗೆಗಳ ಮೇಲೆ ಪ್ರಕರಣ ದಾಖಲಿಸಿದೆ. ಕೌಂಟರ್‌ನಲ್ಲೇ ಕುಡಿಯಲು ನೀಡುವ , ಸ್ವಚ್ಛತೆ ನಿರ್ವಹಣೆ ಕೊರತೆ, ರೆಸ್ಟೋರೆಂಟ್‌ಗಳಲ್ಲಿ ಉತ್ತಮ ವಾತಾವರಣ ಇಲ್ಲದಿರುವವ ಮಳಿಗೆಗಳಿಗೆ ನೋಟೀಸ್ ನೀಡಲಾಗಿದೆ.

ಮುಖ್ಯವಾಗಿ ನಿಗದಿತ ಎಂಆರ್‌ಪಿಗಿಂತಲೂ ಅಧಿಕ ಹಣಕ್ಕೆ ಮಾರಾಟ ಮಾಡುತ್ತಿರುವ ಅಂಗಡಿಗಳ ಮೇಲೂ ತೀವ್ರ ಕ್ರಮ ಕೈಗೊಳ್ಳಲಾಗಿದೆ. ಪರವಾನಗಿ ಪಡೆಯುವಾಗ ನೀಡಿರುವ ನೀಲ ನಕ್ಷೆಯಲ್ಲಿ ಬದಲಾವಣೆ, ರೆಸ್ಟೋರೆಂಟ್ ಮತ್ತು ಬಾರ್‌ಗಳಲ್ಲಿ ಸರಿಯಾಗಿ ವ್ಯವಸ್ಥೆ ಮಾಡದಿರುವ ಸನ್ನದುದಾರರ ಮೇಲೂ ಕ್ರಮ ಕೈಗೊಳ್ಳಲಾಗಿದೆ. ಅಕ್ರಮ ಮದ್ಯ ಮಾರಾಟ ಪ್ರಕರಣ ಕಂಡುಬದಿರುವ ಅಂಗಡಿಗಳ ವಿರುದ್ಧವೂ ಕ್ರಮಕ್ಕೆ ಆದೇಶಿಸಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಜುಲೈ-25

1909: ಫ್ರೆಂಚ್ ವಾಯುಯಾನ ಸಾಹಸಿ ಲೂಯಿ ಬ್ಲೇರಿಯೋ ಇಂಗ್ಲಿಷ್ ಚಾನೆಲ್‌ನ್ನು ವಿಮಾನದಲ್ಲಿ ಯಶಸ್ವಿಯಾಗಿ ದಾಟಿದರು.

1943: ಇಟಲಿಯ ಸರ್ವಾಧಿಕಾರಿ ಬೆನಿಟೊ ಮುಸ್ಸೋಲಿನಿ ಅಧಿಕಾರದಿಂದ ಕೆಳಗಿಳಿಸಲ್ಪಟ್ಟರು.

1957: ಟುನೀಷಿಯಾ ಗಣರಾಜ್ಯವಾಗಿ ಘೋಷಿಸಲ್ಪಟ್ಟಿತು. ಹಬೀಬ್ ಬೂರ್ಗಿಬಾ ದೇಶದ ಮೊದಲ ಅಧ್ಯಕ್ಷರಾದರು.

2000: ಏರ್ ಫ್ರಾನ್ಸ್ ವಿಮಾನ 4590 ಪ್ಯಾರಿಸ್‌ನಿಂದ ಟೇಕ್‌ಆಫ್ ಆದ ಕೆಲವೇ ಕ್ಷಣಗಳಲ್ಲಿ ಅಪಘಾತಕ್ಕೀಡಾಯಿತು.

1977: ಭಾರತದ ರಾಷ್ಟ್ರಪತಿಯಾಗಿ ನೀಲಂ ಸಂಜೀವ ರೆಡ್ಡಿ ಅವರು ಅಧಿಕಾರ ಸ್ವೀಕರಿಸಿದರು.

2007: ಪ್ರತಿಭಾ ಪಾಟೀಲ್ ಅವರು ಭಾರತದ ಮೊದಲ ಮಹಿಳಾ ರಾಷ್ಟ್ರಪತಿಯಾಗಿ ಪ್ರಮಾಣವಚನ ಸ್ವೀಕರಿಸಿದರು.

**ಜನನ**

1978: ವಿಶ್ವದ ಮೊದಲ ಯಶಸ್ವಿ ಟೆಸ್ಟ್ ಟ್ಯೂಬ್ ಬೇಬಿ ಲೂಯಿಸ್ ಬ್ರೌನ್

1857: ರಿಚರ್ಡ್ ಪಿಯರ್ಸನ್, ಬ್ರಿಟಿಷ್ ನಟ

1875: ಜಿಮ್ ಕಾರ್ಬೆಟ್, ಪ್ರಸಿದ್ಧ ಬೇಟೆಗಾರ, ಪರಿಸರ ಸಂರಕ್ಷಕ ಮತ್ತು ಲೇಖಕ

1972: ಮ್ಯಾಟ್ ಲೆ ಬ್ಲಾಂಕ್, ಅಮೆರಿಕದ ನಟ

# ಹಡ್ಡಿ ಹೋಯ್!! ಹಡ್ಡಿ ಹೋಯ್!! ಅಗ್ಗಾ!! ಕುರ್ರಾ!! ಅದೂ, ಇದೂ, ಲಂಗುಲಸ್ಕು-1

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-30**

ನೀನು ಮತ್ತೆ ಆ ಮುಂಡಾಸುಪಾರ್ಟಿ ಇದಾನಲ್ಲ; ಇಬ್ರೂ ಆ ಮೂಲೇಲಿ ನೋಡ್ರೋ ಮಾರಾಯ. ಒಂದೂವರೆ ಕ್ವಿಂಟಾಲ್ ಇದೆ. ನಡೇರಿ, ನಡೇರಿ ಎಂದು ರಾಜ ತಾನು ಮೈಯೆಲ್ಲಾ ಕಣ್ಣಾಗಿ ಆ ಕುರುಚಲಕಾಡಿನ ಪೊದೆಯನ್ನೆಲ್ಲಾ ಹುಡುಕುತ್ತಿದ್ದಾನೆ. ಸುಮಾರು ಇಪ್ಪತ್ತು ಜನರಿದ್ದ ಆ ಗುಂಪು ಬೆಳಗ್ಗಿನಿಂದ ಹತ್ತಾರು ಮೈಲಿ ನಡೆದು ಬಳಲಿ ಬೆಂಡಾಗಿದ್ದರು. ಉರುಟುಗಲ್ಲುಗಳ ಮೇಲೆ ನಡೆಯುತ್ತಾ ಸೀಮೆಸೀಗೆ, ಲಂಟಾನದೊಳಗೆ ನುಗ್ಗುತ್ತಾ ಅತ್ಯಂತ ದುರ್ಗಮವಾದ ಬಂಜರು ಬೆಟ್ಟಗಳನ್ನು ಹತ್ತಿ ಇಳಿದು, ಹ್ಯಾಹ್ಯಾ ಎನ್ನುತ್ತಾ ಬಾಯ್ಮಾಡುತ್ತಾ ಹುಡುಕುತ್ತಿದ್ದಾರೆ.

ಊರಿನ ಹೊರವಲಯದಲ್ಲಿ ಬೆಳೆಸಿದ ಬೆಲಗೆಣಸು ಬೆಳೆಗೆ ಕಾಡುಹಂದಿಗಳು ತಿಕ್ಕಲು ಯುವಕರು ಬಾರ್‌ಗಳಿಗೆ ಸಂಜೆಯಾದೊಡನೆ ಮುಗಿಬೀಳುವಂತೆ ನುಗ್ಗಿ ಮನಸೋಇಚ್ಛೆಯಿಂದ ತಿಂದುಹೋಗುತ್ತಿದ್ದವು. ಬರೀ ತಿಂದುಹೋಗಿದ್ದರೆ ಪರವಾಗಿಲ್ಲ, ಕುಡಿದು ಹೆಚ್ಚಾದ ದಾಂಡಿಗ ಯುವಕರು ಬೇಕೆಂದೇ ಬಾಟಲಿಯನ್ನು ಟೇಬಲ್ಲಿಗೆ ಚಚ್ಚಿ ಒಡೆಯುವಂತೆ, ಅಯೋಗ್ಯರು ಬಾರ್‌ನಲ್ಲಿ ಕೆಲಸ ಮಾಡುವ ಹುಡುಗರ ಕೆನ್ನೆಗೆ ವಿನಾಕಾರಣ ಬಾರಿಸುವಂತೆ ಈ ಗಡವ ಹಂದಿಗಳು ಹೊಲದ ಕೆಲಸಗಾರರನ್ನು ಹಾಗೂ ಓಡಿಸಲು ಬಂದವರನ್ನು ಬೆರಸಾಡಿ ಗಾಯಗೊಳಿಸಿದ್ದವು. ಮೇಲಮನೆ ಗುರುಸಿದ್ದನ ಮಗ ಓಂಕಾರಿ ತನ್ನ ಹಳೇ ಕೇಪಿನ ಕೋವಿಯಿಂದ ಹಂದಿ ಬೆದರಿಸಲು ಹೋದಾಗ ಅವನನ್ನು ಸೀಮೆಸೀಗೆ ಲಂಟಾನಕ್ಕೆ ಸಿಕ್ಕಿಹಾಕಿಸಿ ಅಟಕಾಯಿಸಿಕೊಂಡಿತ್ತು. ಯಾವ ಕಾಲದ್ದೋ ರವೆ, ರಂಜ್ಕ, ಕೇಪು ಹಾಕಿ ತುಂಬಿಸಿದ ಕೋವಿಯನ್ನು ಎತ್ತಲೂ ಅವನಿಗೆ ಅವಕಾಶ ಕೊಡದಂತೆ ನುಗ್ಗಿದ್ದ ಹಂದಿಯು ಅವನ ಎಡಗಾಲನ್ನು ಪ್ಯಾಂಟಿನ ಸಮೇತ ಜಪ್ಪಿಹೋಗಿತ್ತು. ಜಾಲಿಮರಕ್ಕೆ ಧಿಗ್ಗನೆ ಬೆಂಕಿ ಹತ್ತುವಂತೆ ಕಿರುಚಿದ್ದ ಆತನಿಗೆ ಕೋವಿಯಿಂದ ಗುಂಡನ್ನು ಹಾರಿಸಲು ಸಹಾ ಸಾಧ್ಯವಾಗಿರಲಿಲ್ಲ. ಹೊಲವನ್ನು ಕಾಯಲು ಹೋಗುತ್ತಿದ್ದ ಕೇರಿಯ ಕೆಂಚ ಮತ್ತು ತಮ್ಮಣ್ಣಿ ಓಡಿಹೋಗಿ ಬೈನೇ ದಡಿಯಲ್ಲಿ ಹಂದಿಯನ್ನು ಬಡಿಯದಿದ್ದಲ್ಲಿ ಅವತ್ತು ಓಂಕಾರಿ ಪರಂದಾಮಗೈಯುತ್ತಿದ್ದನು.

ಎರಡು ದಿನಗಳ ಹಿಂದೆ ಸಾಧಾರಣವಾದ ಮಳೆಯಾಗಿದ್ದರಿಂದ ಹಳ್ಳಿಯ ರೈತರಲ್ಲಿ ಖುಷಿಯ ಭಾವವಿತ್ತು. ಬೆಳ್ಳಂಬೆಳಿಗ್ಗೆಯೇ ಹೊಲದ ಕೆಲಸಕ್ಕೆಂದು ಹೊರಡುವ ತಯಾರಿ ನಡೆಸಿದ್ದರು. ಇನ್ನೂ ಬೆಳಗು ಮೂಡದೇ ಇದ್ದ ಸಮಯದಲ್ಲಿ ಹಳ್ಳಿಯ ಹೊರವಲಯದಿಂದ ಕೇಳಿಬಂದ ಹೆಂಗಸೊಬ್ಬಳ ಅರ್ತನಾದ ಬೆಳಗಿನ ಜಾವದ ಸವಿನಿದ್ದೆಯನ್ನು ಮಕಾಡೆ ಮಲಗಿ ಅನುಭವಿಸುವವರನ್ನೂ ಸೇರಿಸಿ ಎಚ್ಚರವಾಗಿದ್ದವರನ್ನೆಲ್ಲಾ ಬೆಚ್ಚಿ ಬೀಳಿಸಿತು! ಏನಾಯ್ತು? ಏನಾಯ್ತು? ಎಂದು ಜನ ನಿದ್ದೆಗಣ್ಣಿನಲ್ಲೇ ಹೊರಗೋಡಿಬಂದರು.



ಕೆಳಬಾವಿ ಓಣಿಯಿಂದ ಮೂಲೆಮನೆ ಮೂರ್ತಿಯ ಹೆಂಗಸು ಬರೀ ಲಂಗ-ರವಿಕೆಯಲ್ಲಿ ಸತ್ತೆನೋ ಕೆಟ್ಟೆನೋ ಎನ್ನುತ್ತಾ ಓಡಿಬರುತ್ತಿದ್ದಾಳೆ. ದಿಕ್ಕೇ ತೋಚದೆ ಎತ್ತ ಹೋಗುವುದೆಂದು ತಿಳಿಯದೆ ಮಲ್ಲಕ್ಕನ ಮನೆಯ ದನದಕೊಟ್ಟಿಗೆಯ ಒಳಗೇ ನುಗ್ಗಿದ ಮೂರ್ತಿ ಹೆಂಡತಿ ಆ ಆತಂಕದ ಕ್ಷಣಗಳಲ್ಲೂ ನಾಚಿನೀರಾಗುತ್ತಿದ್ದಳು. ಉಪ್ಪುಹಾಕಿ ಹಲ್ಲುಜ್ಜುತ್ತಿದ್ದ ಮಲ್ಲಕ್ಕ ಸೀದಾ ಕೊಟ್ಟಿಗೆಯೊಳಗೆ ಹೋಗಿ ಎಂತಾ ಆಯ್ತೇ ಭಾರ್ತಿ ಎಂದು ಹತ್ತಾರು ಬಾರಿ ಕೇಳಿದಾಗಲೇ ಮೂರ್ತಿ ಹೆಂಡ್ತಿ ಭಾರ್ತಿ ಇನ್ನೂ ಕತ್ಲಾಗಿದ್ದಾಗ್ಲೇ ಚೆಂಬು ತಗೊಂಡು ಜೋಳದ್ಹೊಲಕ್ಕೆ ಎಲ್ಡಾ ಮಾಡಾಕೋಗಿದ್ದೆ. ಇನ್ನೇನು ಕೂತ್ಕೊಂಡು ರೆಡಿಯಾಗ್ಬೇಕು; ಎಲ್ಲಿತ್ತೋ ಏನೋ; ಹಡ್ಡು ಹಂದಿಯೊಂದು ಸೀದಾ ಹಿಂದ್ಗಡೆಯಿಂದಲೇ ನುಗ್ಗಿ ಬಿಡ್ತು. ಮಕಾಡೆ ಬಿದ್ದ ನನ್ನನ್ನು ಕಚ್ಚಲು ಬರ್ತಿದ್ದ ಹಾಗೇ ನಾನು ಓಡಾಕೆ ಶುರುಮಾಡಿದೆ. ದಾರೀಲಿ ಬಿದ್ದಿದ್ದ ಕೊರ್ಲೊಂದಕ್ಕೆ ನನ್ನ ಸೀರೆ ಸಿಕ್ಕಿಹಾಕಿಕೊಂಡರೂ, ಸೀರೇನ ಕಚ್ಚಿಹಿಡಿದ ಹಂದಿ ಸುಮಾರು ದೂರ ಓಡಿಸ್ಕಂಡು ಬಂತು ಎಂದಳು . ಅದೇ ಕೂಡ್ಲೆ ಮಲ್ಲಕ್ಕ ಮನೆಯೊಳಗೆ ಹೋಗಿ ತನ್ನ ಸೊಸೆದೊಂದು ಸೀರೆ ಕೊಟ್ಟು ಭಾರ್ತಿಗೆ ಉಟ್ಟುಕ್ಕೊಳ್ಳಲು ಹೇಳಿದರು. ಜನರೆಲ್ಲಾ ಚದುರಿದ ಮೇಲೆ ಬುಡಕ್ಕನೆ ಮನೆಯಿಂದ ಮನೆಗೆ ಹಾರಿ ತನ್ನ ಮನೆ ಸೇರಿಕೊಂಡ್ಳು ಭಾರ್ತಿ. ಅಲ್ಲೇ ಬೆಳ್ಳಂಬೆಳಿಗ್ಗೆಯೇ ಕಳ್ಳಭಟ್ಟಿ ಸಾರಾಯಿ ಸಾಗಿಸಲು ಕ್ಯಾನು ಹಿಡಿದುನಿಂತಿದ್ದ ಸುಬ್ಬ ಮತ್ತು ನಾಗೇಶ ಎಂಥಾ ಸೀನು ಮಾರಾಯ, ಕಣ್ತುಂಬಿ ಬಂತು ಎಂದು ನಿಟ್ಟುಸಿರುಬಿಟ್ಟರು. ಬೆಳಿಗ್ಗೆ ಎಂಟರ ಹೊತ್ತಿಗೆ ಮೂರ್ತಿ ಈ ಹಂದಿಯನ್ನು ಜೀವಸಹಿತ ಉಳಿಸಬಾರದೆಂದು ಶಪಥಮಾಡಿ ಗುಡ್ಡಗೆರೆಯವರಿಗೆ ಸುದ್ದಿ ತಲುಪಿಸಿಯೇಬಿಟ್ಟ. ಮೊದಲೇ ಕಾಡುಹಂದಿ ಶಿಕಾರಿಯೆಂದರೆ ಬಾಯ್ದೆರೆದುಕೊಂಡೇ ಕುಳಿತಿರುತ್ತಿದ್ದ ಗುಡ್ಡಗೆರೆಯವರು ಏಳೆಂಟು ಜನರನ್ನು ಒಟ್ಟುಗೂಡಿಸಿ ಜೀಪಿನಲ್ಲಿ ನಕ್ಯಾವನ್ನು ಸಂಜೆ ಐದರ ಹೊತ್ತಿಗೆ ತಲುಪಿಯೇಬಿಟ್ಟರು.

ಹೋದವರಿಗೆ ಮೂರ್ತಿ ಮನೆಯಲ್ಲೇ ಊಟದ ವ್ಯವಸ್ಥೆಯಾಗಿತ್ತು. ರಾತ್ರಿ ಏಳರೊಳಗೆಯೇ ಊಟ ಮುಗಿಸಿ ವಿಶ್ರಾಂತಿಗಾಗಿ ಉರುಳಿಕೊಂಡರು. ನಕ್ಯಾದವರೇ ಆದ ಹತ್ಹದಿನೈದು ಜನರನ್ನು ಜೊತೆಗೆ ಕರೆದುಕೊಳ್ಳಲು ಮೂರ್ತಿಗೆ ಜವಾಬ್ದಾರಿ ಹೊರಿಸಿದರು. ಗುಡ್ಡಗೆರೆಯಿಂದ ಹೋದವರಿಗೆ ಜೊತೆಗೊಬ್ಬೊಬ್ಬರಂತೆ ನಕ್ಯಾದವರು ಸೇರಿಕೊಂಡರು.

ಬೆಳ್ಳಬೆಳಿಗ್ಗೆಯೇ ಊರಕೆರೆ ಏರಿಯ ಕಡೆಯಿಂದ ಒದರಲು ಪ್ರಾರಂಭಿಸಿಯೇಬಿಟ್ಟರು. ಕೆಂಜಿಗೆ ಜಿಗ್ಗು, ಸೀಮೆಸೀಗೆ ಲಂಟಾನ, ಅಸಾಧ್ಯವಾಗಿ ಬೆಳೆದಿದ್ದ ಕಾಡುಸೀಗೆ ದಬ್ಬಲಿನೊಳಗೆ ನುಗ್ಗಾಡಿ ಮೈಕೈ ಕೆತ್ತಿಸಿಕೊಂಡಿದ್ದೇ ಬಂತು. ದನಕಾಯುವುದರಿಂದ ಹಂದಿ ಜಾಡನ್ನು ಚೆನ್ನಾಗಿ ತಿಳಿದಿದ್ದ ದಾಳ ಮತ್ತು ಗಣನ್‌ಮಂಜ ಮುಂದಾಳಾಗಿ ನಿಂತು, ಎಲ್ಲರನ್ನೂ ಒಟ್ಟು ಸೇರಿಸಿ ಇಂತಿಂಥವರು ಇಂತಿಂತಲ್ಲಿ ನಿಲ್ಲಬೇಕೆಂದು ನಿರ್ದೇಶನ ನೀಡಿದರು. ಜೊತೆಯಲ್ಲಿದ್ದ ಏಳೆಂಟು ನಾಯಿಗಳನ್ನು ಕಾಡು ಸೋಸಲೆಂದು ಕರೆದುಕೊಂಡು ಬಂದರೆ ಅವು ತಮ್ಮ ತಮ್ಮಲ್ಲೇ ಕಚ್ಚಾಟ ನಡೆಸಲು ಶುರುಮಾಡಿದವಲ್ಲದೇ ಈಗಾಗಲೇ ಜಾಡಿಸಿ ಒದೆಸಿಯೂಕೊಂಡಿದ್ದವು.

ಶಿಕಾರಿಗೆ ಹೋದವರಲ್ಲಿ ಹಂದಿ ಕೆಡವುವ ಹುಮ್ಮಸ್ಸಿನಲ್ಲಿದ್ದವರಲ್ಲಿ ಅನೇಕ ರೀತಿಯ ವರ್ಗಗಳಿರುತ್ತವೆ. ಕೋವಿಯಿದ್ದು ತಾವೇ ಶಿಕಾರಿಗೆ ಬಂದವರು, ಬೇರೆಯವರ ಕೋವಿ ತಂದವರು, ಕೋವಿಯನ್ನು ತಾರದೆ ಬರೀ ಕತ್ತಿಯನ್ನೂ, ಕೋಲನ್ನು ತಂದು ಒದರಲು ಬಂದವರು, ಗಂಡಿ ತೋರಿಸುವವರು, ನಾಯಿಯನ್ನು ಕರೆತಂದಿರುವವರು ಇದನ್ನೆಲ್ಲಾ ಯಾಕೆ ಹೇಳ್ತಿದ್ದೇನೆಂದರೆ ಶಿಕಾರಿಯಾದಾಗ ಮಾಂಸದ ಪಾಲಿನ ಗಾತ್ರ ಅವರವರ ಭಾಗವಹಿಸುವಿಕೆಯ ಮೇಲೆ ನಿರ್ಧಾರವಾಗುತ್ತದೆ.

ತಲೆಯ ಹಿಂಭಾಗದ ಕುತ್ತಿಗೆಯಿಂದ ಶುರೂ ಮಾಡಿ ಬಾಲದವರೆಗೆ ನಾಲ್ಕು ಬೆರಳಗಲದ ಮಾಂಸದ ಪಟ್ಟಿಗೆ ಹಾರು ಎನ್ನುತ್ತಾರೆ. ಹಾಗೆಯೇ ಹಿಂಭಾಗದ ಇಡೀ ಎಡ ತೊಡೆಯನ್ನು ಬೀವು ಎನ್ನುತ್ತಾರೆ. ಗುಂಪಿನ ಶಿಕಾರಿಯಲ್ಲಿ ಹಾರು, ಬೀವುಗಳು ಹಂದಿಯನ್ನು ಗುಂಡುಹೊಡೆದು ಕೊಂದವನ ಹಕ್ಕಿನ ಪಾಲು. ಇವೆರಡನ್ನು ಮೀಸಲಿಟ್ಟನಂತರ ಹಾಗೂ ಹುರ್ತೊಂಡಿಗೆ ಬಳಸುವುದನ್ನು ತೆಗೆದಿಟ್ಟ ನಂತರ ಉಳಿದುದನ್ನು ಶಿಕಾರಿಯಲ್ಲಿ ಭಾಗವಹಿಸಿದವರಿಗೆ ಹಂಚಲಾಗುತ್ತದೆ. ಕೋವಿಪಾಲು, ನಾಯಿಪಾಲು, ಯಾರದ್ದಾದರೂ ತೋಟದೊಳಗೆ ಹೊಡೆದಿದ್ದರೆ ಆ ತೋಟದವರಿಗೆ ತೋಟದ ಪಾಲು, ಗಂಡಿ ತೋರಿಸಿದವರ ಪಾಲು, ಹೊಡೆದವರ ಪಾಲು, ಇಷ್ಟಲ್ಲದೆ ರೆಗ್ಯುಲರ್ ಪಾಲು ಬೇರೆ ಇರುತ್ತದೆ.

ಏ ಜಬ್ಬ, ನಿನ್ನೆ ಮಲಗಿತ್ತು ಅಂದಿದ್ದೆಯಲ್ಲ ಯಾವ ಜಾಗ ಸರಿಯಾಗಿ ತೋರಿಸು ಎಂದ ಜಯರಾಮ. ಅದೇ ದೊಡ್ಡ ಬೀಟೆಮರ ಇದೆಯಲ್ಲ, ಅದರ ಹಿಂದಿನ ಬಿದಿರಿನಮಣಕೆ ಕೆಳಗೆ ದನಾ ಬಿದ್ಕಂಡಂಗೆ ಬಿದ್ಕಂಡಿತ್ತು. ದರಗಳುಬು ವಳ್ಳೆ ಮಲ್ಗೆ ಹೂವಂಗೆ ಗಲಗಲ ಅಂತ ಎದ್ದಿದ್ವು. ನಾನು ಅಳುಬು ಎತ್ತನಾ ಅಂತಾ ಹೋದೆ, ಲೌಡಿ ಮಗಂದು ಆ ಹಂದಿ ಒಂದ್ಸಲ ಎದ್ದುನಿಂತ್ಕಂಡು ಕೂದ್ಲುನ್ನೆಲ್ಲಾ ನಿಗುರಿಸಿ ನನ್ನೆಡೆಗೆ ನೋಡ್ತು ನೋಡಿ, ನನ್ನ ಕೈಲಿದ್ದಿದ್ದು ಬರೀ ಕುಡ್ಲು. ಸಾಧಾರಣ ಹಂದಿಯಲ್ಲ ಅದು. ದಯ್ಯ ದಯ್ಯ! ನಾನ್ ಸೀದಾ ತಿರುಗಿ ಓಡಿದ್ದೇ, ಇಲ್ನೋಡಿ ಎಡಗಾಲು ಹೆಬ್ಬೆರಳಿನ ಉಗುರು ಬೇರೆ ಕಿತ್ತೋಗಿದೆ ಎಂದು ತನ್ನ ಮಾತಿಗೆ ಸಾಕ್ಷಿಯನ್ನೂ ತೋರಿಸಿದ. ಹಂಗಾದರೆ ಬೆಕ್ಕಿನಗದ್ದೆ ಕಡೆಯಿಂದ ಒದರಿಕೊಂಡು ಬರೋಣ. ಚೋಳಿಕೆರೆ ತೋಟಾನೂ ಸೇರಿಸ್ಕೊಂಡು ಬರಬೇಕು. ಬಿಳಿಯನಹಿತ್ಲು ಕಡೆಯಿಂದ ಮೇಲುಕ್ಕೆ ಬಂದು ಬಾಳಳ್ಳಿ ರಸ್ತೆಲಿ ಎಲ್ರೂ ಸೇರಬೇಕು. ಆಗೋದೇ ಆದ್ರೆ ಅಷ್ರೊಳ್ಗೆ ಶಿಕಾರಿಯಾಗಿರುತ್ತೆ. ಸುಮಾರು ಕ್ವಿಂಟಾಲ್ ಹತ್ರನೇ ಇದೆಯಂತೆ. ಹುರ್ತುಂಡು ಮಾಡಿ ಸರೀ ಜಡಿಬೇಕು ಎಂದ ದಾಳ ಗಂಡಿಗಳಿಗೆ ಜನ ನಿಲ್ಲಿಸತೊಡಗಿದ. ಹಳ್ಳದಗಂಡಿ, ಸುಕ್ಕಿಗಂಡಿ, ಕೇರಿಗಂಡಿ, ಪರ್ಬುಗಂಡಿ, ಬಾಳೇತೋಟದ ಗಂಡಿ, ಕಡಾಕಲ್‌ಗುಂಡಿ, ನೀರ್‌ಕಾಸ್‌ಕೊಳ, ಹುಲ್ಲುಗುಡ್ಡೆ, ಸಣ್‌ಬೀಟೇಮರ, ದೊಡ್‌ಬೀಟೇಮರ, ಲೋಕಳ್ಳಿಗೆರೆ ಮುಂತಾದೆಡೆ ಕೋವಿಯವರನ್ನು ನಿಲ್ಲಿಸಿ, ಬೆಕ್ಕಿನಗದ್ದೆ ಹಡ್ಲಿನ ಕಡೆಯಿಂದ ಒದರಲು ಶುರುಮಾಡಿಯೇಬಿಟ್ಟರು. ಹಡ್ಡಿ ಹೋಯ್!! ಹಡ್ಡಿ ಹೋಯ್!! ಹಡ್ಡಿ ಹೋಯ್!! ಅಗ್ಗಾ!! ಕುರ್ರಾ!! ಅದೂ, ಇದೂ, ಲಂಗುಲಸ್ಕು ಅಂತಾ ಗದ್ದಲವೆಬ್ಬಿಸುತ್ತಾ ಸುಮಾರು ಇಪ್ಪತ್ತು ಜನರ ಗುಂಪು ಹತ್ತುಹನ್ನೆರಡು ನಾಯಿಗಳೊಡನೆ ಜಿಗ್ಗು-ಲಂಟಾನದೊಳಗೆ ನುಗ್ಗಿ ಮುಂದೆ ಬರಲಾರಂಭಿಸಿತು. ಮನುಷ್ಯರಿಗಿಂತ ಮುಂದಿದ್ದ ನಾಯಿಗಳೇ ತಮ್ಮ ತಮ್ಮೊಳಗೇ ಕಚ್ಚಾಡುವ ಕೆಲಸವನ್ನು ಸದ್ಯಕ್ಕೆ ಬದಿಗಿಟ್ಟು ಸಂದಿಗೊಂದಿಯನ್ನು ಬಿಡದೆ ಹ್ಯಾಹ್ಯಾ ಎಂಬಂತೆ ನಾಲಿಗೆ ಇಳಿಬಿಟ್ಟುಕೊಂಡು ಸಿಕ್ಕಸಿಕ್ಕಲ್ಲೆಲ್ಲಾ ನುಗ್ಗಾಡಲಾರಂಭಿಸಿದವು. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248